ಸಾರ್ವಜನಿಕ ಮೂತ್ರಾಲಯಗಳು ಅಂದ್ರೆ ಒಂದರ್ಥದಲ್ಲಿ ಮೋಕ್ಷಾಲಯಗಳಿದ್ದಂತೆ. ಅಲ್ಲಿನ 'ಲ್ಯಾಟ್ರಿನ್' ಸಾಹಿತ್ಯದಿಂದ ಒದಗಿ ಬರುವ ಸ್ಫೂರ್ತಿಗೂ, ಅಲ್ಲಿ ಲಭ್ಯವಾಗುವ ವಿಮೋಚನಾನಂದಕ್ಕೂ ಸರಿಸಾಟಿಯಾದುದು ಯಾವುದಿದೆ ಹೇಳಿ? 'ಮೂತ್ರಾತುರಾಣಾಮಃ ನ ಭಯಂ ನ ಲಜ್ಜಾ.' ಒಂದೀಟೂ ನಾಚಿಕೆ ಇಲ್ಲದೆ, ಜರೂರತ್ತು ಹುಟ್ಟಿತೊ, ಯಾರನ್ನೂ ಲೆಕ್ಕಿಸದೆ, ಸೀದಾ ರಸ್ತೆಯಂಚಿಗೆ ಹೋಗಿ ವಿಸರ್ಜನಾಕಾರ್ಯ ಮುಗಿಸುವ ನರರೂಪದ ದ್ವಿಪಾದಿಗಳೇನು ಕಮ್ಮಿ ಅಂತೀರಾ!

ಈಗ್ಗೆ ಕೆಲವರ್ಷಗಳ ಹಿಂದೆ ನಮ್ಮ ಸರ್ಕಾರ ಜಾಗೃತವಾಗಿ, ಎಲ್ಲಂದರಲ್ಲಿ ಮೂತ್ರಿಸುವ ಅನಾಗರಿಕ ಕ್ರಿಯೆಗೆ ತಡೆಹಾಕಲು ಮುಂದಾಯಿತು. ನೂರು ರೂಪಾಯಿ ದಂಡ ವಿಧಿಸುವ ಕಾನೂನೂ ಬಂತು. ಬಂತು ಅಷ್ಟೇ. 'ಮೂತ್ರಾತುರಾಣಾಮ್ ನ ಶಿಕ್ಷಾ, ನ ದಂಡಂ.' ಬಹುಸಂಖ್ಯಾತರ ಆಶೆಗೆ ವಿರುದ್ಧವಾದ ನಡೆ ಪ್ರಜಾಸತ್ತೆಗೆ ಸಲ್ಲದು, ಎಂದಿತು ಪ್ರಭುತ್ವ. ಹೀಗಾಗಿ ಮುಕ್ತಮೂತ್ರ ನಿಯಂತ್ರಣ ಕಾನೂನು ಬಹುತೇಕ ಎಲ್ಲ ಕಾನೂನುಗಳಂತೆ ಠುಸ್.

ಮೂತ್ರಕಾರಣವಾಗಿ ಬಸ್ ಮಿಸ್ ಆಗೋದು, ಅದೇ ಕಾರಣಕ್ಕೆ ಸರಿಸಮಯಕ್ಕೆ ಆಫೀಸ್‌ಗೆ ಹೋಗಲಾಗದ್ದು, ಬಾಸ್ ಎಂಬ ದೂರ್ವಾಸನಿಂದ ಹೂವೇರಿಸಿಕೊಳ್ಳೋದು ಇರುವಂತೆಯೆ, ಅದೇ ಮೂತ್ರನೆಪದ ಲಾಭಪಡೆಯುವ ಜಾಣರೂ ಇದ್ದಾರೆ. ಮೇಲಿಂದ ಮೇಲೆ, 'ಒಂದಕ್ಕೆ' ಎನ್ನುತ್ತ, ಪರೀಕ್ಷಾಹಾಲ್‌ನಿಂದ ಹೊರಬರುವ ವಿದ್ಯಾರ್ಥಿಮಿತ್ರರಿಗೆ, ಮೂತ್ರಾಲಯಗಳೇ ನಕಲುಚೀಟಿಗಳ ಆಶ್ರಯತಾಣಗಳು! ಮತ್ತೆ ಈ ಕಡೆ, ಆಫೀಸ್‌ನ ಕುಶಾಗ್ರಮತಿಗಳಿಗೆ ಮೂತ್ರಕಾರಣದಿಂದ ಹೊರಬಂದು, 'ವ್ಯವಹಾರ' ಕುದುರಿಸುವ ಅವಕಾಶವೂ ಉಂಟು.

★★★

ಇಷ್ಟೆಲ್ಲ ಅನುಕೂಲತೆಗಳಿದ್ದೂ, ಜೀವನದ ಸಂಧ್ಯಾಕಾಲದ ಅನುಭವವೊ ಘೋರಾತಿಘೋರ ಕಾಡಿದರೆ ಹಳಹಳಿ ಯಾಕೆ? ಮೂತ್ರಮೂಲದಿಂದ ಉದ್ಭವಿಸುವ ಬಿ.ಪಿ. ಪ್ರಾಬ್ಲಮ್ಮೂ, ಕಿಡ್ನಿ ಟ್ರಬಲ್ಲೂ... ಬಹುಮೂತ್ರ ರೋಗ, ಮೂತ್ರದುರಿತ, ಮೂತ್ರ ಕಟ್ಟುವುದು, ಮೂತ್ರಶಂಕೆಗಳು ಅದು ಇದೂ ಸೇರಿ, 'ಸಾಕುಮಾಡಯ್ಯ ತಂದೆ ಲೋಕದಾಟವನು, ಅಳಲಳಲಿ, ತೊಳತೊಳಲಿ, ನಿನ್ನಡಿಗೆ ಬಂದಿಹೇನು' ಎಂದು ಭವಲೋಕದ ವ್ಯಾಮೋಹ ಕಳಚುವಲ್ಲಿ, ವೈರಾಗ್ಯಭಾವ ಅರಳಿಸುವ ಮೂತ್ರಸಂಜಾತ ಬೇನೆಗಳು ಬೇಕಲ್ಲವೆ ಬಾಳಿನಲ್ಲಿ!

ಒಂದಕ್ಕೆ ಅಂಜಿ, ಒಂದಕ್ಕೆ ಅಳುಕುವ<br>
ಜಗದ ಜನರ ಕಂಡು ನಗುತಿಹನಯ್ಯಾ<br>
ನಮ್ಮ ಮೂಲೋಕದೊಡೆಯ

## ಮಲ್ಲಿಕಾರ್ಜುನ ಹುಲಗಬಾಳಿ

ಬಾಗಲಕೋಟೆ ಜಿಲ್ಲೆಯ ಬನಹಟ್ಟಿಯವರಾದ ಲೇಖಕರು ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರು. ಅವರ ಹಾಸ್ಯ ಬರಹಗಳು, ಲಲಿತ ಪ್ರಬಂಧಗಳು ನಾಡಿನ ಹಲವಾರು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಕರ್ನಾಟಕ ವಿಶ್ವವಿದ್ಯಾಲಯ, ಚೆನ್ನಮ್ಮ ವಿಶ್ವವಿದ್ಯಾಲಯ, ಮಹಾರಾಷ್ಟ್ರ ರಾಜ್ಯದ ಪಠ್ಯಪುಸ್ತಕಗಳಲ್ಲಿ ಮತ್ತು 'ಶತಮಾನದ ನೂರು ಪ್ರಬಂಧಗಳು' ಸಂಕಲನದಲ್ಲಿ ಅವರ ಪ್ರಬಂಧಗಳು ಸೇರಿವೆ.